ಭಾವಿಸಿದ್ದೇನೆ. ಈ ಬಗ್ಗೆ ಮಂತ್ರಿಗಳು ಆದೇಶ ಕೊಟ್ಟು ಅದನ್ನು ಮಾಡಿಸುತ್ತಾರೆಯೇ ಎಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ; ಹೊಸದಾಗಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳು ಏನಾದರೂ ಇದ್ದರೆ ಮಾನ್ಯ ಸದಸ್ಯರು ಅದನ್ನು ಸೂಚಿಸಿದರೆ ಅವುಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿದ ಅಭ್ಯರ್ಥಿಗಳ ಸಂಖ್ಯೆ

೪೧. ಶ್ರೀಮತಿ ಮನೋರಮಾ ಮಂಧ್ವರಾಜ್ (ಉಡುಪಿ).—ಮಾನ್ಯ ಕಾರ್ಮಿಕರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೧-೧-೧೯೮೯ರ ಅನ್ವಯ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿದ ಅಭ್ಯರ್ಥಿಗಳ ಒಟ್ಟು ಸಂಖ್ಯೆ (ಜಿಲ್ಲಾವಾರು ವಿವರವನ್ನು ಕೊಡುವುದು).

ಆ) ೧೯೮೮-೮೯ನೇ ಸಾಲಿನಲ್ಲಿ ಅಂದರೆ ೧-೧-೧೯೮೯ರವರೆಗೆ ಉದ್ಯೋಗ ಪಡೆದ ಒಟ್ಟು ಅಭ್ಯರ್ಥಿಗಳ ಸಂಖ್ಯೆ (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು).

ಶ್ರೀ ಹೆಚ್. ಜಿ. ಗೋವಿಂದೇಗೌಡ (ಕಾರ್ಮಿಕ ಮಂತ್ರಿಗಳು).—

ಅ) ೧೦,೫೨,೦೧೮. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-೧ರಲ್ಲಿ ಕೊಡಲಾಗಿದೆ.

ಆ) ೮,೬೦೫. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-೨ರಲ್ಲಿ ಕೊಡಲಾಗಿದೆ.

ಅನುಬಂಧ-೧

ಕ್ರಮ ಸಂಖ್ಯೆ	ಜಿಲ್ಲೆ	ಗಂಡಸರು	ಹೆಂಗಸರು	ಮೊತ್ತ
೧	ಬೆಂಗಳೂರು	೨೮೪೩೭೦	೭೫೧೦೩	೩೫೯೪೭೩
೨	ಬೆಳಗಾಂ	೫೬೩೬೦	೭೮೭೦	೬೪೨೩೦
೩	ಬಳ್ಳಾರಿ	೨೩೫೦೪	೩೬೬೮	೨೭೧೭೨
೪	ಬೀದರ್	೧೮೯೯೮	೧೭೯೧	೨೦೧೮೯
೫	ಬಿಜಾಪುರ	೩೫೯೨೮	೪೩೧೦	೩೮೨೩೮
೬	ಚಿಕ್ಕಮಗಳೂರು	೨೧೪೦೨	೭೨೬೫	೨೮೬೬೭
೭	ಚಿತ್ರದುರ್ಗ	೩೧೧೯೩	೭೨೩೦	೩೮೪೨೩
೮	ದಕ್ಷಿಣ ಕನ್ನಡ	೩೫೯೫೦	೧೬೯೫೦	೫೨೯೦೦
೯	ಧಾರವಾಡ	೫೬೩೨೮	೯೩೦೯	೬೫೬೩೭
೧೦	ಗುಲ್ಬರ್ಗಾ	೨೯೦೨೯	೩೩೬೭	೩೨೩೯೬
೧೧	ಹಾಸನ	೨೪೭೮೩	೫೦೬೯	೨೯೩೫೨
೧೨	ಕೋಲಾರ	೩೪೫೦೯	೫೬೪೬	೪೦೧೫೫
೧೩	ಕೊಡಗು	೭೪೬೫	೪೦೮೯	೧೧೫೯೪
೧೪	ಮಂಡ್ಯ	೨೨೩೧೦	೪೮೯೭	೨೭೨೦೭
೧೫	ಮೈಸೂರು	೪೭೧೭೭	೧೨೦೯೫	೫೯೨೭೨
೧೬	ರಾಯಚೂರು	೨೨೮೬೨	೨೮೬೬	೨೫೭೨೮
೧೭	ಶಿವಮೊಗ್ಗ	೩೫೨೬೪	೮೭೯೮	೪೪೦೮೨
೧೮	ತುಮಕೂರು	೪೩೨೬೬	೧೦೬೮೩	೫೩೯೯೯
೧೯	ಉತ್ತರ ಕನ್ನಡ	೨೪೭೦೨	೮೨೫೨	೩೨೯೫೪
	ಒಟ್ಟು	೮೫೫೨೬೦	೧೯೯೨೯೮	೧೦೫೨೦೧೮

ಅನುಬಂಧ —೨

ಕ್ರಮ ಸಂಖ್ಯೆ	ಜಿಲ್ಲೆ	ಗಂಡಸರು	ಹೆಂಗಸರು	ಒಟ್ಟು
೧	ಬೆಂಗಳೂರು	೨೯೩	೫೨೨	೩೫೧೫
೨	ಬೆಳಗಾಂ	೩೨೩	೧೮	೩೪೧
೩	ಬಳ್ಳಾರಿ	೩೨೦	೬೩	೩೮೩
೪	ಬೀದರ್	೧೧೬	೧೯	೧೩೫
೫	ಬಿಜಾಪುರ	೧೪೪	೧೦	೧೫೪
೬	ಚಿಕ್ಕಮಗಳೂರು	೨೪೦	೫೩	೨೯೩
೭	ಚಿತ್ರದುರ್ಗ	೮೬	೨೧	೧೦೭
೮	ದಕ್ಷಿಣ ಕನ್ನಡ	೪೫೮	೧೮೦	೬೩೮
೯	ಧಾರವಾಡ	೩೭೦	೫೨	೪೨೨
೧೦	ಗುಲ್ಬರ್ಗ	೧೦೪	೪	೧೦೮
೧೧	ಹಾಸನ	೨೦೦	೨೫	೨೨೫
೧೨	ಕೋಲಾರ	೫೦೪	೨೭	೫೩೧
೧೩	ಕೊಡಗು	೧೦೩	೪೨	೧೪೫
೧೪	ಮಂಡ್ಯ	೧೦೩	೨೬	೧೨೯
೧೫	ಮೈಸೂರು	೩೬೮	೩೯	೪೦೭
೧೬	ರಾಯಚೂರು	೧೪೫	೭	೧೫೨
೧೭	ಶಿವಮೊಗ್ಗ	೨೧೬	೮೫	೨೯೧
೧೮	ತುಮಕೂರು	೨೯೨	೩೮	೩೩೦
೧೯	ಉತ್ತರ ಕನ್ನಡ	೨೨೭	೭೨	೨೯೯
	ಒಟ್ಟು	೭೩೦೨	೧೩೦೩	೮೬೦೫

ಶ್ರೀಮತಿ ವಿನೋರಮಾ ಪಾಧ್ವರಾಜ್.—ಸಭಾಧ್ಯಕ್ಷರೆ, ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಮನೆಗೊಂದು ಉದ್ಯೋಗ ಕೊಡುತ್ತೇವೆನ್ನುವ ಘೋಷಣೆಯನ್ನು ಮಾಡಿದ್ದರು ಇದರಲ್ಲಿ ಆದು ಸೇರಿದೆಯೆ ? ನಿಮ್ಮ ಆದೃಷ್ಟದಲ್ಲಿ ವಿನೆಗೊಂದು ಉದ್ಯೋಗ ಕೊಡಲಿಕ್ಕೆ ಸಾಧ್ಯವಿಲ್ಲ. ತಾಲ್ಲೂಕು ಮಟ್ಟಗಳಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಖಾಲಿಯಿರತಕ್ಕ ೫೦ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿ ನಿರುದ್ಯೋಗಿಗಳಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ನಾನು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮನೆಗೊಂದು ಉದ್ಯೋಗ ಅಂದರೆ ಸರ್ಕಾರಿ ಉದ್ಯೋಗವೆಂದು ಅರ್ಥವಲ್ಲ. ಯಾವುದೇ ಘೋಷಣೆ ಕೂಗಿದರೂ ಯಾರೇ ಆಗಲಿ ಸರ್ಕಾರದ ವತಿಯಿಂದಲೇ ಕೊಡಬೇಕೆಂದೇನೂ ಅಲ್ಲ, ಖಾಸಗಿಯವರಿಂದ ಕೊಡಿಸಬಹುದು ಸರ್ಕಾರದವರು ಬೇರೆಯವರಿಗೆ ಹೇಳಿ ಕೊಡಿಸಬಹುದು, ಆ ಉದ್ದೇಶವನ್ನು ಇಟ್ಟುಕೊಂಡು ಪ್ರಾಡಿರತಕ್ಕದ್ದು. ಈ ರೀತಿಯಲ್ಲಿ ಉದ್ಯೋಗ ಕೊಡುತ್ತೇವೆ ಎಂದು ಹೇಳಿರುವುದು.

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಹೊಲದ ಆಳುಗಳನ್ನು ನಿಮ್ಮವರು ಎಂದು ತಿಳಿದು ಕೊಳ್ಳೋಣವೇ ?

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಇನ್ನೊಂದು ಸಾರಿ ಚುನಾವಣೆಯಲ್ಲಿ ಇದನ್ನೇ ಹೇಳಿಬಿಡಿ.

ಶ್ರೀ ಬಿ. ಧರ್ಮಪ್ಪ.—ನೀವು ಗರೀಬಿ ಹಠಾವೋ ಎಂದು ಇನ್ನೊಂದು ಸಾರಿ ಹೇಳಿ.

ಅಧ್ಯಕ್ಷರು.—ಸಾಕು ಬಿಡಿ, ಈಗ ಶ್ರೀ ಆರ್.ಎನ್. ನಾಯಕ್‌ರವರೇ ನಿಮ್ಮ ಪ್ರಶ್ನೆಯನ್ನು ಕೇಳಿ.